# All India Radio: Bangalore
# National Bulletin In Kannada
# 20.03.2026  1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಉತ್ತರಪ್ರದೇಶದ ವೃಂದಾವನದಲ್ಲಿಂದು ರಾಮಕೃಷ್ಣ ಮಿಷನ್‌ನ ಆಂಕಾಲಜಿ ಘಟಕ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು
2. ಭಯೋತ್ಪಾದನಾ ಬೆಂಬಲವನ್ನು ಪಾಕಿಸ್ತಾನ ನಿಲ್ಲಿಸುವವರೆಗೂ ಸಿಂಧು ನದಿ ನೀರು ಹಂಚಿಕೆ ಒಪ್ಪಂದ ಸ್ಥಗಿತ: ವಿಶ್ವಸಂಸ್ಥೆಯಲ್ಲಿ ಭಾರತ ಹೇಳಿಕೆ
3. ಪಶ್ಚಿಮ ಏಷ್ಯಾ ಸಂಘರ್ಷ: ತೆಹರಾನ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ: ಗಲ್ಫ್ ಪ್ರದೇಶದಾದ್ಯಂತ ಇರಾನ್ ದಾಳಿ ಮುಂದುವರಿಕೆ
4. ಇಂದು ವಿಶ್ವ ಮೌಖಿಕ ಆರೋಗ್ಯ ದಿನ: ಉತ್ತಮ ಬಾಯಿಯ ನೈರ್ಮಲ್ಯ ಅಭ್ಯಾಸ ಬೆಳೆಸಿಕೊಳ್ಳಲು ಕೇಂದ್ರ ಸಚಿವ ಜೆ.ಪಿ. ನಡ್ಡಾ ಕರೆ
5. ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿಂದು ಅರ್ಜುನ್-ಹರಿಹರನ್ ಜೋಡಿ ಸ್ಪರ್ಧೆ

<><><><>

ಮೂರು ದಿನಗಳ ಉತ್ತರ ಪ್ರದೇಶ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ವೃಂದಾವನದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮದ ನಂದ ಕಿಶೋರ್ ಸೋಮಾನಿ ಆಂಕಾಲಜಿ ಘಟಕವನ್ನು ಉದ್ಘಾಟಿಸಿದರು.  ಅತ್ಯಾಧುನಿಕ ರೇಡಿಯೋ ಥೆರಪಿ ಮತ್ತು ರೋಗ ನಿರ್ಣಯ ಸೌಲಭ್ಯಗಳನ್ನು ಹೊಂದಿರುವ ಈ ನೂತನ ಆಂಕಾಲಜಿ ಘಟಕ, ಆ ಪ್ರದೇಶದಲ್ಲಿ ಕ್ಯಾನ್ಸರ್ ಸೇವಾ ಸೌಲಭ್ಯಗಳನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಇದಕ್ಕೂ ಮುನ್ನ ರಾಷ್ಟ್ರಪತಿಯವರು, ಇಂದು ಬೆಳಗ್ಗೆ ಪ್ರೇಮಾನಂದ ಜಿ ಮಹಾರಾಜ್ ಆಶ್ರಮದ ಜೊತೆಗೆ ನೀಬ್ ಕರೋರಿ ಬಾಬಾ ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ, ಪುಷ್ಪನಮನ ಸಲ್ಲಿಸಿದರು. ಸಂಜೆ ರಾಷ್ಟ್ರಪತಿಯವರು, ಹಿರಿಯ ನಾಗರಿಕರು, ಮಹಿಳೆಯರು ಮತ್ತು ಮಕ್ಕಳ ಆರೈಕೆಗೆ ಕೆಲಸ ಮಾಡುವ ಸಂಸ್ಥೆಯಾದ ವಾತ್ಸಲ್ಯಗ್ರಾಮ್‌ಗೆ ಭೇಟಿ ನೀಡಲಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರಿಂದು ನವರಾತ್ರಿಯ ಆಧ್ಯಾತ್ಮಿಕ ವಾತಾವರಣದ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದು, ಈ ಪವಿತ್ರ ಸಂದರ್ಭದಲ್ಲಿ ಮಾತೆ ಅಂಬೆಯ ಭಕ್ತಿ, ಮನಸ್ಸಿನಲ್ಲಿ ಅಪಾರ ಶಾಂತಿ ಮತ್ತು ಚೈತನ್ಯ ತುಂಬುತ್ತದೆ ಎಂದು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಾತೆ ಅಂಬೆ ಕುರಿತ ಭಕ್ತಿಗೀತೆಯೊಂದನ್ನು ಅವರು ಹಂಚಿಕೊಂಡಿದ್ದಾರೆ.

<><><><>

ಜಾಗತಿಕ ಭಯೋತ್ಪಾದನೆಯ ಕೇಂದ್ರ ಬಿಂದುವಾಗಿರುವ ಪಾಕಿಸ್ತಾನ, ತನ್ನ ನಡೆಯನ್ನು ತಿದ್ದುಕೊಳ್ಳುವವರೆಗೆ ಸಿಂಧು ಜಲ ಒಪ್ಪಂದ ಸ್ಥಗಿತಗೊಂಡಿರಲಿದೆ ಎಂದು ಭಾರತ ತಿಳಿಸಿದೆ. ವಿಶ್ವ ಜಲ ದಿನದ ಅಂಗವಾಗಿ ವಿಶ್ವಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಪಿ. ಹರೀಶ್, ಈ ಕುರಿತು ಹೇಳಿಕೆ ನೀಡಿದ್ದು, ಸಿಂಧು ನದಿ ನೀರು ಹಂಚಿಕೆ ಒಪ್ಪಂದವನ್ನು ಅಮಾನತಿನಲ್ಲಿಡುವ ಭಾರತದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ. ಭಾರತ ಯಾವಾಗಲೂ ಜವಾಬ್ದಾರಿಯುತ ರಾಷ್ಟ್ರವಾಗಿ ನಡೆದುಕೊಂಡಿದೆ, ಆದರೆ ಜವಾಬ್ದಾರಿ ಎಂಬುದು ಉಭಯ ಪಕ್ಷೀಯವಾಗಿರಬೇಕು. ಒಪ್ಪಂದಗಳ ಪಾವಿತ್ರ್ಯತೆಯ ಬಗ್ಗೆ ವಾದಿಸುವ ಪಾಕಿಸ್ತಾನ, ಮೊದಲು ಮಾನವ ಜೀವದ ಪಾವಿತ್ರ್ಯತೆಯನ್ನು ಗೌರವಿಸುವುದನ್ನು ಕಲಿಯಬೇಕು ಹಾಗೂ ಭಯೋತ್ಪಾದನೆಯನ್ನು ತನ್ನ ಸರ್ಕಾರಿ ನೀತಿಯನ್ನಾಗಿ ಬಳಸುವುದನ್ನು ಬೇಷರತ್ತಾಗಿ ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ. ೧೯೬೦ರಲ್ಲಿ ಸೌಹಾರ್ದತೆಯ

ದೃಷ್ಟಿಯಿಂದ ಸಿಂಧು ನದಿ ನೀರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಪಾಕಿಸ್ತಾನ ಮೂರು ಯುದ್ಧಗಳು ಸೇರಿದಂತೆ ಹಲವು ಭಯೋತ್ಪಾದಕ ದಾಳಿ ನಡೆಸುವ ಮೂಲಕ ಒಪ್ಪಂದದ ಆಶಯವನ್ನು ಉಲ್ಲಂಘಿಸಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಭಾರತದ ಜಲಜೀವನ್ ಮಿಷನ್ ಕುರಿತು ಮಾತನಾಡಿದ ಕಾಯಂ ಪ್ರತಿನಿಧಿ ಪಿ. ಹರೀಶ್, ಗ್ರಾಮೀಣ ಕುಟುಂಬಗಳಿಗೆ ಕುಡಿಯುವ ನೀರನ್ನು ಪೂರೈಸುವ ವಿಶ್ವದ ಅತಿದೊಡ್ಡ ಕಾರ್ಯಕ್ರಮಗಳಲ್ಲಿ ಒಂದಾದ ಜಲಜೀವನ್ ಮಿಷನ್ ಅನ್ನು ಭಾರತ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿವೆ ಎಂದು ಮಾಹಿತಿ ಹಂಚಿಕೊಂಡರು.

<><><><>

ಇರಾನ್ ಪ್ರಜೆಗಳು ಇಂದು ಪರ್ಶಿಯನ್ ಹೊಸ ವರ್ಷ ಸೂಚಿಸುವ ನೌರೂಜ್‌ಅನ್ನು ಆಚರಿಸುತ್ತಿರುವ ನಡುವೆ ಇಸ್ರೇಲ್, ತೆಹ್ರಾನ್ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇರಾನ್‌ನ ಪ್ರಮುಖ ಅನಿಲ ಘಟಕಗಳನ್ನು ಗುರಿಯಾಗಿಸಿ, ದಾಳಿ ನಡೆಸದಿರುವ ಕುರಿತು ಇಸ್ರೇಲ್ ಸಂಕೇತಿಸಿದ ಒಂದು ದಿನದ ಬಳಿಕ ಇಂದು ಇರಾನ್ ರಾಜಧಾನಿಯ ಸುತ್ತಮುತ್ತ ಸ್ಫೋಟಗಳು ವರದಿಯಾಗಿವೆ. ಈ ನಡುವೆ, ಇರಾನ್ ಗಲ್ಫ್ ಪ್ರದೇಶದಾದ್ಯಂತ ಇಂಧನ ಗುರಿಗಳ ಮೇಲೆ ತನ್ನ ದಾಳಿಯನ್ನು ತೀವ್ರಗೊಳಿಸಿದೆ. ಈದ್ ಉಲ್ ಫಿತರ್ ಪ್ರಾರ್ಥನೆಗಳ ನಡುವೆ ದುಬೈನಲ್ಲಿ ಸ್ಫೋಟಗಳು ಕೇಳಿಸಿದ್ದು, ವಾಯು ರಕ್ಷಣಾ ವ್ಯವಸ್ಥೆಗಳು ಆಗಮಿಸುತ್ತಿದ್ದ ಹಲವು ಕ್ಷಿಪಣಿಗಳನ್ನು ಹೊಡೆದುರುಳಿಸಿದೆ.  ಇರಾನ್, ಇಸ್ರೇಲ್‌ಯೆಡೆಗೆ ಕ್ಷಿಪಣಿ ದಾಳಿ ಮುಂದುವರಿಸಿದೆ. ವಿಶ್ವಸಂಸ್ಥೆಯಲ್ಲಿ ನಿನ್ನೆ ಭದ್ರತಾ ಮಂಡಳಿ ತುರ್ತು ಸಭೆ ನಡೆಸಿದ್ದು, ಈ ವೇಳೆ ಗಲ್ಫ್ ರಾಷ್ಟ್ರಗಳು ದಾಳಿಗಳನ್ನು ನಿಲ್ಲಿಸುವಂತೆ ಇರಾನ್‌ಗೆ ಆಗ್ರಹಿಸಿದೆ. ಪಶ್ಚಿಮ ಏಷ್ಯಾ ಪ್ರದೇಶದಾದ್ಯಂತ ದಾಳಿಗಳು ಮುಂದುವರಿದಿದ್ದು, ಸೌದಿ ಅರೆಬಿಯಾ, ಕತಾರ್, ಕುವೈತ್ ಮತ್ತು ಯುಎಇ ರಾಷ್ಟ್ರಗಳು ತಮ್ಮ ಪ್ರಮುಖ ಇಂಧನ ಸೌಲಭ್ಯಗಳ ಮೇಲೆ ದಾಳಿಯಾಗಿರುವುದಾಗಿ ವರದಿ ಮಾಡಿದೆ.

<><><><>

ಇಂದು ಬಾಯಿಯ ಆರೋಗ್ಯ ಹಾಗೂ ನೈರ್ಮಲ್ಯ ಕಾಪಾಡುವ, ಅಗತ್ಯದ ಕುರಿತು ಜಾಗೃತಿ ಮೂಡಿಸುವ ವಿಶ್ವ ಮೌಖಿಕ ಆರೋಗ್ಯ ದಿನವಾಗಿದ್ದು, 'ಸಂತಸದ ಮುಖ, ಸಂತೋಷದ ಜೀವನ' ಎಂಬ ಧ್ಯೇಯದೊಂದಿಗೆ, ಜನ ಸಾಮಾನ್ಯರು ತಮ್ಮ ಬಾಯಿ ಆರೋಗ್ಯವನ್ನು ಖಚಿತಪಡಿಸಿಕೊಳ್ಳಲು, ಸಕಾಲಿಕ ಪರೀಕ್ಷೆ, ತಜ್ಞರ ಮಾರ್ಗದರ್ಶನ ಹಾಗೂ, ಚಿಕಿತ್ಸೆ-ಆರೈಕೆ ಪಡೆಯುವಂತೆ, ಅರಿವು ಮೂಡಿಸಲಾಗುತ್ತದೆ. ವಿಶ್ವ ಮೌಖಿಕ ಆರೋಗ್ಯ ದಿನದ ಸಂದರ್ಭದಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ, ಸಾರ್ವಜನಿಕರು ಉತ್ತಮ ಮೌಖಿಕ ನೈರ್ಮಲ್ಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ಬಾಯಿಯ ಆರೋಗ್ಯ ಕಾಪಾಡಲು ಸರಿಯಾದ ರೀತಿಯಲ್ಲಿ ಹಲ್ಲುಜ್ಜುವುದು, ಸಕ್ಕರೆಯುಕ್ತ ಆಹಾರಗಳ ನಿಯಂತ್ರಿತ ಸೇವನೆ, ನಿಯಮಿತ ದಂತ ತಪಾಸಣೆ ಮಾಡಿಸಿಕೊಳ್ಳುವಂತಹ ಸರಳ ಅಭ್ಯಾಸಗಳ ಪ್ರಾಮುಖ್ಯತೆಯನ್ನು ಉಲ್ಲೇಖಿಸಿದ್ದಾರೆ.

<><><><>

ವಿಶ್ವಸಂಸ್ಥೆಯ ಅಲ್ಪಸಂಖ್ಯಾತ ವ್ಯವಹಾರಗಳ ತಜ್ಞರೊಬ್ಬರು ವಕ್ಫ್ ತಿದ್ದುಪಡಿ ಕಾಯ್ದೆ-೨೦೨೫ರ ಕುರಿತು ನೀಡಿರುವ ವರದಿಯನ್ನು ಭಾರತ ಸತ್ಯಕ್ಕೆ ದೂರವಾಗಿದೆ ಎಂದು ತಳ್ಳಿಹಾಕಿದೆ. ಜಿನೀವಾದಲ್ಲಿ ನಡೆದ ಮಾನವಹಕ್ಕುಗಳ ಮಂಡಳಿಯ ಅಧಿವೇಶನದಲ್ಲಿ ಭಾರತ ಈ ಹೇಳಿಕೆ ನೀಡಿದ್ದು, ಈ ವರದಿ ಕಾಯ್ದೆಯ ಹಿನ್ನೆಲೆ ಮತ್ತು ಇತಿಹಾಸದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೆ ಸಿದ್ಧಪಡಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

<><><><>

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ - ನ್ಯಾಕೋ ಮೂಲಕ ನವದೆಹಲಿಯಲ್ಲಿಂದು ಸುರಕ್ಷಾ ಸಂಕಲ್ಪ ಕಾರ್ಯಶಾಲಾ ಎಂಬ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಜಿಲ್ಲಾ ಮಟ್ಟದಲ್ಲಿ ಏಡ್ಸ್ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವ ಉದ್ದೇಶದಿಂದ

ಈ ಕಾರ್ಯಾಗಾರ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನ್ಯಾಕೋ ಮಹಾನಿರ್ದೇಶಕ ಡಾ. ರಾಕೇಶ್ ಗುಪ್ತಾ, ಏಡ್ಸ್ ಇಂದಿಗೂ ಸಾರ್ವಜನಿಕ ಆರೋಗ್ಯಕ್ಕೆ ದೊಡ್ಡ ಸವಾಲಾಗಿ ಉಳಿದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಎಲ್ಲಾ ಹಂತಗಳಲ್ಲಿ ನಿರಂತರ ಜಾಗೃತಿ, ನಾವೀನ್ಯತೆ ಮತ್ತು ಸಂಘಟಿತ ಕ್ರಮಗಳ ಅಗತ್ಯವಿದೆ ಎಂದು ತಿಳಿಸಿದ್ದಾರೆ. ೨೦೨೭ರ ವಿಶ್ವ ಏಡ್ಸ್ ದಿನದ ವೇಳೆಗೆ ಭಾರತದಲ್ಲಿ ಏಡ್ಸ್ ರೋಗವನ್ನು ಸಂಪೂರ್ಣವಾಗಿ ಹತೋಟಿಗೆ ತಂದ ಸಾಂಕ್ರಾಮಿಕ ರೋಗ ಎಂದು ಘೋಷಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ಪುನರುಚ್ಚರಿಸಿದರು.

<><><><>

ರಕ್ಷಣಾ ಸಚಿವಾಲಯದ ಪುನರ್ ವಸತಿ ಮಹಾನಿರ್ದೇಶನಾಲಯ - ಡಿಜಿಆರ್ ದೆಹಲಿ ಕಂಟೋನ್ಮೆಂಟ್‌ನ ಅರಾವಳಿ ಸಭಾಂಗಣದಲ್ಲಿಂದು ಇಂದು ನಿವೃತ್ತ ಸೈನಿಕರಿಗಾಗಿ ಬೃಹತ್ ಉದ್ಯೋಗ ಮೇಳ ಆಯೋಜಿಸಿದೆ. ನಿವೃತ್ತ ಯೋಧರನ್ನು ಕಾರ್ಪೊರೇಟ್ ಮತ್ತು ಕೈಗಾರಿಕಾ ವಲಯದ ಪ್ರಮುಖ ಉದ್ಯೋಗದಾತರೊಂದಿಗೆ ಸಂಪರ್ಕಿಸಲು ಈ ಮೇಳ ವೇದಿಕೆಯಾಗಿದೆ.

<><><><>

ಕೇಂದ್ರ ಭಾರೀ ಕೈಗಾರಿಕೆಗಳ ಸಚಿವಾಲಯ ದೇಶದಲ್ಲಿ ವಾರ್ಷಿಕ ೬ ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ ಸಮಗ್ರ ಸಿಂಟರ್ಡ್ ನಿಯೊಡೈಮಿಯಮ್ ಐರನ್ ಬೋರಾನ್ ಅಪರೂಪದ ಭೂಮಿಯ ಕಾಯಂ ಅಯಸ್ಕಾಂತಗಳ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಜಾಗತಿಕ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಈ ಬಿಡ್ಡಿಂಗ್ ಪ್ರಕ್ರಿಯೆ ಕೇಂದ್ರ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಪಾರದರ್ಶಕವಾಗಿ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಸಚಿವಾಲಯ ತಿಳಿಸಿದೆ. ಆಸಕ್ತರು ಇಂದಿನಿಂದಲೇ ಗುತ್ತಿಗೆ ದಾಖಲೆಗಳನ್ನು ಪಡೆಯಬಹುದಾಗಿದ್ದು, ಬಿಡ್ ಸಲ್ಲಿಸಲು ಮೇ ೧೮ ಕೊನೆಯ ದಿನವಾಗಿದೆ. ತಾಂತ್ರಿಕ ಬಿಡ್‌ಗಳನ್ನು ಮೇ ೧೯ರಂದು ತೆರೆಯಲಾಗುವುದು. ಪೂರ್ವ ಬಿಡ್ ಸಭೆಯನ್ನು ಏಪ್ರಿಲ್ ೭ರಂದು ನಿಗದಿಪಡಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕಳೆದ ನವೆಂಬರ್‌ನಲ್ಲಿ ಕೇಂದ್ರ ಸಂಪುಟ ಅನುಮೋದಿಸಿದ ಈ ಯೋಜನೆಗೆ ೭ ಸಾವಿರದ ೨೦೦ ಕೋಟಿ ರೂಪಾಯಿಗಳಿಗೂ ಅಧಿಕ ಹಣಕಾಸಿನ ನೆರವು ನೀಡಲಾಗಿದೆ. ಅಪರೂಪದ ಭೂಮಿಯ ಕಾಯಂ ಅಯಸ್ಕಾಂತಗಳ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸುವ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಅಯಸ್ಕಾಂತಗಳು ವಿದ್ಯುತ್‌ಚಾಲಿತ ವಾಹನ, ಪವನಶಕ್ತಿ, ವಿದ್ಯುನ್ಮಾನ, ಏರೋಸ್ಪೇಸ್ ಮತ್ತು ರಕ್ಷಣಾ ವಲಯಗಳಲ್ಲಿ ಬಳಸಲಾಗುವ ಅತ್ಯಂತ ನಿರ್ಣಾಯಕ ಬಿಡಿ ಭಾಗಗಳಾಗಿವೆ.

<><><><>

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು ಇಶಾರಾಣಿ ಮತ್ತು ಮಾಳವಿಕಾ ಬನ್ಸೋಡ್ ಪರಸ್ಪರ ಮುಖಾಮುಖಿಯಾಗಲಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಭಾರತದ ತನ್ವೀರ್ ಶರ್ಮಾ, ಜಪಾನ್‌ನ ನಾತ್ಸುಕಿ ನಿದಾಯ್‌ರಾ ವಿರುದ್ಧ ಸೆಣಸಲಿದ್ದಾರೆ. ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು ಭಾರತದ ಹರಿಹರನ್ ಅಂಸ ಕರುಣನ್ ಮತ್ತು ಎಂ.ಆರ್. ಅರ್ಜುನ್ ಜೋಡಿ ಇಂಡೋನೇಷ್ಯಾದ ಬಗಸ್ ಮೌಲಾನಾ ಮತ್ತು ಲಿಯೋ ರಾಲಿ ಕಾರ್ನಾಂಡೋ ಜೋಡಿಯನ್ನು ಎದುರಿಸಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>